ಮನೆಯ ಹುಡುಗಿಗೆ ಒಂದು ವಿಶೇಷ ಕೌಶಲವಿದೆ. ಬೆಟ್ಟದಷ್ಟು ಎತ್ತರ ರಾಶಿ ಹಾಕಿದ ಒಣಹುಲ್ಲನ್ನು ರಾತ್ರಿ ಬೆಳಗಾಗುವುದರೊಳಗೆ ಬಂಗಾರದ ನೂಲನ್ನಾಗಿ ಬದಲಾಯಿಸುತ್ತಾಳಂತೆ. ಮೊದಲು ಬಂಗಾರದ ನೂಲನ್ನು ಮಾರಾಟ ಮಾಡಿ ಹಣ ಸಂಪಾದಿಸಿಕೊಳ್ಳಿ. ಮತ್ತೆ ಅವಳನ್ನು ಮದುವೆಯಾಗಲು ಯೋಚಿಸಿ' ಎಂದು ಹೇಳಿದ. ಬಂಗಾರವೆಂದ ಕೂಡಲೇ ಜಮೀನ್ದಾರನ ಮಗನಿಗೆ ದುರಾಸೆ ಹುಟ್ಟಿತು. ಮನೆಯ ಕೋಣೆಯೊಳಗೆ ಒಣ ಹುಲ್ಲಿನ ದೊಡ್ಡ ರಾಶಿ ಪೇರಿಸಿದ. ಮಾಂಜಿಯನ್ನು ಕರೆದ. 'ಕೋಣೆಯೊಳಗೆ ಹೋಗು. ರಾತ್ರಿ ಕಳೆಯುವುದರೊಳಗೆ ಹುಲ್ಲನ್ನೆಲ್ಲ ಬಂಗಾರದ ಎಳೆಗಳನ್ನಾಗಿ ಬದಲಾಯಿಸು' ಎಂದು ಹೇಳಿ ಅವಳನ್ನು ಒಳಗೆ ಕಳುಹಿಸಿ ಕೋಣೆಯ ಬಾಗಿಲು ಭದ್ರಪಡಿಸಿದ.

ಒಳಗೆ ಕುಳಿತಿದ್ದ ಮಾಂಜಿಗೆ ಕಳವಳ ಉಂಟಾಯಿತು. ಚಿಕ್ಕಮ್ಮ ಹೇಳಿದ ಸುಳ್ಳಿನಿಂದ ತಾನೀಗ ಬಂಗಾರದ ನೂಲು ತೆಗೆಯುವ ಶಿಕ್ಷೆಗೆ ಗುರಿಯಾಗಿರುವುದು ಅವಳಿಗೆ ಅರ್ಥವಾಯಿತು. ಆಗ ನವಿಲು ಕೊಟ್ಟ ಗರಿಯ ನೆನಪು ಬಂದಿತು. ಅದನ್ನು ಸವರಿ, ನವಿಲನ್ನು ಸ್ಮರಿಸಿಕೊಂಡಳು. ಮರುಕ್ಷಣವೇ ನೆಲದ ವರೆಗೆ ಬಿಳಿಯ ಗಡ್ಡವಿರುವ ಒಬ್ಬ ಮುದುಕ ಅವಳೆದುರು ಕಾಣಿಸಿಕೊಂಡ. 'ನಿನಗೆ ಬಂದಿರುವ ಕಷ್ಟ ಏನೆಂಬುದು ನನಗೆ ಗೊತ್ತಿದೆ. ಇಷ್ಟು ಹುಲ್ಲನ್ನು ಬಂಗಾರದ ನೂಲನ್ನಾಗಿ ಬದಲಾಯಿಸಿ ಕೊಡುತ್ತೇನೆ. ಅದಕ್ಕಾಗಿ ನಾನು ಏನು ಕೇಳಿದರೂ ಕೊಡುತ್ತೀಯಾ?' ಎಂದು ಕೇಳಿದ. ಮಾಂಜಿ ಕಣ್ಣೀರು ತುಂಬಿ ಅವನಿಗೆ ಕೈ ಮುಗಿದಳು. 'ಖಂಡಿತ ಕೊಡುತ್ತೇನೆ. ನನಗೆ ಬಂದ ಕಷ್ಟವನ್ನು ಪರಿಹರಿಸು' ಎಂದು ಹೇಳಿದಳು. ತಕ್ಷಣ ಮುದುಕ ಹುಲ್ಲನ್ನೆಲ್ಲ ಕೈಯಿಂದ ಸ್ಪರ್ಶಿಸಿ ಬಂಗಾರದ ನೂಲುಗಳಾಗಿ ಮಾರ್ಪಡಿಸಿದ. ಬೆಳಗಾಯಿತು. ಜಮೀನ್ದಾರನ ಮಗ ಕೋಣೆಯ ಕದ ತೆರೆದ. ಚಿನ್ನದ ನೂಲಿನ ರಾಶಿ ನೋಡಿ ಅಚ್ಚರಿಯಿಂದ ಕುಣಿದಾಡಿದ. 'ಬಾ, ನಾವಿಬ್ಬರೂ ಮದುವೆಯಾಗೋಣ' ಎಂದು ಹೇಳಿದ.

ಆಗ ಮಾಂಜಿಗೆ ಉಪಕಾರ ಮಾಡಿದ ಮುದುಕ ಪ್ರತ್ಯಕ್ಷನಾದ. 'ನಾನು ಏನು ಕೇಳಿದರೂ ಕೊಡುವುದಾಗಿ ಒಪ್ಪಿಕೊಂಡ ನೀನು ನನ್ನನ್ನು ಮದುವೆಯಾಗಬೇಕು' ಎಂದು ಹೇಳಿದ. ಮಾಂಜಿ, 'ನನಗೆ ಸಹಾಯ ಮಾಡಿದ ನೀವು ದೇವರಿಗಿಂತ ದೊಡ್ಡವರು. ನಾನು ನಿಮ್ಮ ಮಡದಿಯಾಗುತ್ತೇನೆ' ಎಂದು ಹೇಳಿ ಅವನ ಕೈ ಹಿಡಿದುಕೊಂಡಳು. ಆಗ ಮುದುಕ ಒಬ್ಬ ಸುಂದರ ರಾಜಕುಮಾರನಾಗಿ ಬದಲಾದ. 'ನಾನು ಈ ದೇಶದ ಯುವರಾಜ. ಒಂದು ಸಲ ನವಿಲುಗಳಿಗೆ ಹಿಂಸೆ ಕೊಟ್ಟು ಕೊಂದುಹಾಕಿದೆ. ಆಗ ಪಕ್ಷಿಗಳ ರಾಣಿ ನನ್ನ ಯೌವನವನ್ನು ಕಸಿದುಕೊಂಡಳು. ಅವಳ ಕಾಲು ಹಿಡಿದುಕೊಂಡು ಕ್ಷಮೆ ಬೇಡಿದೆ. ಅವಳು ಸುಂದರ ಯುವತಿಯೊಬ್ಬಳು ಮನ ಮೆಚ್ಚಿ ನನ್ನ ಕೈ ಹಿಡಿದರೆ ಮೊದಲಿನಂತಾಗುವುದಾಗಿ ಹೇಳಿದಳು. ನನಗೆ ಹುಲ್ಲನ್ನು ನೂಲುಗಳಾಗಿ ಬದಲಾಯಿಸಬಲ್ಲ ಶಕ್ತಿ ನೀಡಿದವಳು ಪಕ್ಷಿಗಳ ರಾಣಿ. ಬಾ, ನೀನು ನನ್ನ ರಾಣಿಯಾಗಿರು' ಎಂದು ಹೇಳಿ ರಾಜಕುಮಾರ ಅವಳನ್ನು ಅರಮನೆಗೆ ಕರೆದುಕೊಂಡು ಹೋದ. ■



# ಹುಲಿಯಾಗದ ಕತ್ತೆ

■ ನೀ.ಶ್ರೀಶೈಲ ಹುಲ್ಲೂರು ಜಮಖಂಡಿ

ಸೋಮಾರಿ ಕತ್ತೆಯೊಂದು
ಊರ ಬದಿಯ ಹೊಲದಿ ನಿಂದು
ಹಚ್ಚ ಹಸಿರು ಹೊಲವ ನೋಡಿ
ನುಗ್ಗುತಿದ್ದಿತು

ಹೊಟ್ಟೆ ತುಂಬ ತಿಂದುಕೊಂಡು
ಹೊಳೆಯ ನೀರು ಕುಡಿದುಕೊಂಡು
ಬೆಚ್ಚಗಿರುವ ಜಾಗ ನೋಡಿ
ಮಲಗುತಿದ್ದಿತು

ಊರ ಜನರು ಇದನು ಕಂಡು
ಕೋಲು ದೊಣ್ಣೆ ಹಿಡಿದುಕೊಂಡು
ಹೊಡೆದು ಬಡಿದು ಊರ ಆಚೆ
ದೂಡಿಬಿಟ್ಟರು

ಗುಡ್ಡ ಸೇರಿ ಅಲೆದ ಕತ್ತೆ
ಊರು ಬಿಟ್ಟ ವಿಷಯ ತಿಳಿದು
ತಮ್ಮ ತಮ್ಮ ಮೋರೆ ನೋಡಿ
ಖುಷಿಯಪಟ್ಟರು

ಹಸಿವಿನಿಂದ ಅಲೆಯುವಾಗ
ಕಾಡಿನಲ್ಲಿ ಸತ್ತ ಹುಲಿಯ
ಚರ್ಮ ನೋಡಿ ಕತ್ತೆ ಮನದಿ
ಹೊಂಚು ಹಾಕಿತು

ತಾನೆ ಅದನು ಹೊದ್ದುಕೊಂಡು
ತೋಟಕೆಲ್ಲ ನುಗ್ಗಿಕೊಂಡು
ತಿಂದು ತೇಗಿ ಎಲ್ಲರೆದುರು
ಮೆರೆಯತೊಡಗಿತು

ಹುಲಿ ಇದೆಂದು ನಂಬಿ ಜನತೆ
ಹೆದರಿಕೊಂಡು ಮುದುರಿಕೊಂಡು
ಹಾಳು ಬೆಳೆಯ ನಡುವೆ ಉಸಿರು
ಗರೆಯತೊಡಗಿತು

ಕತ್ತೆ ದಂಡು ಒಂದು ಹೊಲದಿ
ನುಗ್ಗಿ ತಿಂದು ನೀರು ಕುಡಿದು
ಖುಷಿಯು ಹೆಚ್ಚಿ ಹರುಷದಿಂದ
ಕಿರುಚತೊಡಗಿತು

ಹುಲಿಯ ಸೋಗು ಹಾಕಿ ಮೆರೆವ
ಕತ್ತೆ ಇದನು ಕೇಳಿ ಕುಣಿದು
ತನ್ನ ದನಿಯ ತೆಗೆದು ರಾಗ
ಹಾಡತೊಡಗಿತು

ಇದರ ಕಪಟವರಿತು ಜನರು
ಒಡನೆ ಬಂದು ದಾಳಿ ಮಾಡಿ
ಕತ್ತೆ ಸಾಯುವಂತೆ ಬಡಿದು
ಹೊರಟು ಹೋದರು

ಮೋಸ ಮಾಡಿದವನು ಕೊನೆಗೆ
ಹೀಗೆ ಮಣ್ಣು ಸೇರಿಬಿಡುವ
ಎನುವ ಮಾತ ನೆನೆದು ಮನೆಯ
ದಾರಿ ಹಿಡಿದರು ■